## 1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು
## ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು

**ದಿನಾಂಕಃ 19 ನೇ ಏಪ್ರಿಲ್ ಮಾಹೆ 2022**

**ಉಪಸ್ಥಿತರುಃ ಶ್ರೀ ಜೆ.ವಿ.ಕುಲಕರ್ಣಿ** ಬಿ.ಎಸ್.ಸಿ.,ಎಲ್.ಎಲ್.ಬಿ.,(ಸ್ಪೆ)
1 ನೇ ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು

## ಓ.ಎಸ್.ನಂ.14/2022

ವಾದಿ : ಶೋಭಾ ಕೋಂ ವೀರೇಶ ಪೂಜಾರ,
ವಯಾಃ 40 ವರ್ಷ, ಉಃ ಮನೆಗೆಲಸ,
ವಾಸಃ ನೆಗಳೂರು, ತಾಃ ಹಾವೇರಿ.

(ಅರ್ಜಿದಾರರ ಪರವಾಗಿ ಶ್ರೀ ಸಿ.ಎಂ.ಎನ್., ವಕೀಲರು)

**ವಿರುದ್ಧ**

ಪ್ರತಿವಾದಿಗಳು : 1. ವೀರಭದ್ರಪ್ಪ ತಂದೆ ಹಾಲೇಶಪ್ಪ ಅಜ್ಜಂಪುರ,
ವಯಾಃ 52 ವರ್ಷ, ಉಃ ಸರಕಾರಿ ನೌಕರ,
ವಾಸಃ ತರಳಬಾಳು ಬಡಾವಣೆ, ಭಗತ್‌ಸಿಂಗ್
ಸರ್ಕಲ್ ಹತ್ತಿರ, ತಾವರಿಗೆ ರಸ್ತೆ, ರಟ್ಟಿಹಳ್ಳಿ,
ತಾಃ ರಟ್ಟಿಹಳ್ಳಿ

2. ಮುರುಗೇಶಪ್ಪ ತಂದೆ ಹಾಲೇಶಪ್ಪ ಅಜ್ಜಂಪುರ,
ವಯಾಃ 49 ವರ್ಷ, ಉಃ ವ್ಯಾಪಾರ ವ ವ್ಯವಸಾಯ,
ವಾಸಃ ತುಮ್ಮಿನಕಟ್ಟಿ, ತಾಃ ರಾಣೆಬೆನ್ನೂರು.

3. ಶಿವಲೀಲಾ ಕೋಂ ಜಯದೇವಪ್ಪ ಅಜ್ಜಂಪುರ,
ವಯಾಃ 42 ವರ್ಷ, ಉಃ ವ್ಯವಸಾಯ,
ವಾಸಃ ರಟ್ಟಿಹಳ್ಳಿ, ತಾಃ ರಟ್ಟಿಹಳ್ಳಿ
ಹಾಲಿ ವಾಸಃ ಲಿಂಗರಾಜಪ್ಪ ಇಚ್ಚಂಗಿ,
ಸಾಃ ಅಗಡಿ, ತಾಃ ಹಾವೇರಿ.

4. ನೀರಜ ತಂದೆ ಜಯದೇವಪ್ಪ ಅಜ್ಜಂಪುರ,
ವಯಾಃ 06 ವರ್ಷ, ಉಃ ಇಲ್ಲ,
ವಾಸಃ ರಟ್ಟೆಹಳ್ಳಿ, ತಾಃ ರಟ್ಟೆಹಳ್ಳಿ
ಹಾಲಿ ವಾಸಃ ಲಿಂಗರಾಜಪ್ಪ ಇಚ್ಚಂಗಿ,
ಸಾಃ ಅಗಡಿ, ತಾಃ ಹಾವೇರಿ.

5. ವಿರುಪಾಕ್ಷಪ್ಪ ತಂದೆ ಜಯದೇವಪ್ಪ ಅಜ್ಜಂಪುರ,
ವಯಾಃ 43 ವರ್ಷ, ಉಃ ಸರ್ಕಾರಿ ನೌಕರಿ,
ವಾಸಃ ಡಿ.ಏ.ಆರ್.ಎಚ್2,ಡಿ–2 ಬ್ಲಾಕ್, ಹೌಸ್‌ನಂ.11,
ಎಸ್‌ಎನ್ ಪೇಟೆ, ಬಳ್ಳಾರಿ, ತಾಃ ವ ಜಿಃ ಬಳ್ಳಾರಿ.

6. ಮಮತಾ ಕೋಂ ಸೂರ್ಯಪ್ರಕಾಶ ಸಿಂಗಾಡಿ,
ವಯಾಃ 38 ವರ್ಷ, ಉಃ ಮನೆಗೆಸಲ,
ವಾಸಃ ಡಿ. ಹೇರಳ, ತಾಃ ರಾಯದುರ್ಗ,
ಜಿಃ ಅನಂತಪುರ, ರಾಜ್ಯಃ ಆಂಧ್ರಪ್ರದೇಶ.

7. ಗೌರವ್ವ ಕೋಂ ಮುರುಗೆಪ್ಪ ಅಜ್ಜಂಪುರ,
ವಯಾಃ 35 ವರ್ಷ, ಉಃ ಮನೆಗೆಲಸ,
ವಾಸಃ ತುಮ್ಮಿನಕಟ್ಟಿ, ತಾಃ ರಾಣೆಬೆನ್ನೂರು.

8. ಶೈಲಜಾ ಕೋಂ ವೀರಭದ್ರಪ್ಪ ಅಜ್ಜಂಪುರ,
ವಯಾಃ 45 ವರ್ಷ, ಉಃ ಮನೆಗೆಲಸ,
ವಾಸಃ ತುಮ್ಮಿನಕಟ್ಟಿ, ತಾಃ ರಾಣೆಬೆನ್ನೂರು.

(ಪ್ರತಿವಾದಿ1, 2, 7 ಹಾಗೂ 8 ರವರ ಪರವಾಗಿ ಶ್ರೀ ಎಂ.ಬಿ.ಎಂ., ವಕೀಲರು)(ಪ್ರತಿವಾದಿ 3 ಮತ್ತು 4 ರವರ ಪರವಾಗಿ ಶ್ರೀ ಪಿ.ಆರ್.ಕೆ., ವಕೀಲರು)(ಪ್ರತಿವಾದಿ 5 ರವರ ಪರವಾಗಿ ಶ್ರೀ ಎ.ಜಿ.ಸಿ., ವಕೀಲರು)

## ಮಧ್ಯಂತರ ಅರ್ಜಿ ಸಂಖ್ಯೆ: 2

ಅರ್ಜಿದಾರ : ಶೋಭಾ ಕೋಂ ವೀರೇಶ ಪೂಜಾರ

**ವಿರುದ್ಧ**

ಎದುರುದಾರರು : ವೀರಭದ್ರಪ್ಪ ತಂದೆ ಹಾಲೇಶಪ್ಪ ಅಜ್ಜಂಪುರ
ಹಾಗೂ ಇತರರು.

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು**

## ಮಧ್ಯಂತರ ಅರ್ಜಿ ಸಂಖ್ಯೆ 2 ರ ಮೇಲೆ ಆದೇಶ

ಸದರಿ ಅರ್ಜಿಯನ್ನು ವಾದಿಯು ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಮಧ್ಯಂತರ ತಡೆ ಆಜ್ಞೆಯಾಗಿ ಸಲ್ಲಿಸಿದ್ದು, ಅರ್ಜಿಯ ಜೊತೆ ಸಲ್ಲಿಸಿದ ಪ್ರಮಾಣ ಪತ್ರದಲ್ಲಿ ವಾದಿಯು ಈ ಕೆಳಕಂಡಂತೆ ಹೇಳಿರುತ್ತಾರೆ.

2. ಅರ್ಜಿದಾರರು ತಮ್ಮ ಅರ್ಜಿಯಲ್ಲಿ ಹೇಳಲಾದ ಅಂಶಗಳ ಸಂಕ್ಷಿಪ್ತ ಸಾರಾಂಶವೇನೆಂದರೆ:-

ವಾದಿಯು ಈ ದಾವೆಯನ್ನು ವಿಭಾಗ ಮತ್ತು ಪ್ರತ್ಯೇಕ ಸ್ವಾಧೀನವನ್ನು ಕೋರಿ ದಾವಾ ಆಸ್ತಿಗಳಲ್ಲಿ ತನಗೆ 1/6 ಹಿಸ್ಸೆ ಆಸ್ತಿಯನ್ನು ಸರಸ-ನಿರಸ ವಿಭಾಗಿಸಿ ಪ್ರತ್ಯೇಕ ಕಬ್ಜಾ ಕೊಡಿಸಿಕೊಡಬೇಕೆಂದು ದಾವೆ ಸಲ್ಲಿಸಿರುತ್ತಾರೆ. ವಾದಿಯ ಪ್ರಕಾರ ದಾವಾ ಆಸ್ತಿಗಳು

ಕುಟುಂಬದ ಮೂಲ ಪುರುಷನಾದ ಹಾಲೇಶಪ್ಪ ಇವರಿಗೆ ಅವಿಭಕ್ತ ಕುಟುಂಬದ ಆಸ್ತಿಗಳಾಗಿ ಬಂದಿದ್ದು, ಹಾಲೇಶಪ್ಪ ಇವರು ದಿನಾಂಕ 13.07.2017 ರಂದು ಮೃತಪಟ್ಟಿರುತ್ತಾರೆ ಎಂಬುದಾಗಿ ತಿಳಿಸಿರುತ್ತಾರೆ. ಹಾಲೇಶಪ್ಪನ ಹೆಂಡತಿ ಗಿರಿಜಮ್ಮ ಇವರು ಸಹ ದಿನಾಂಕ 01.06.2020 ರಂದು ಮೃತಪಟ್ಟಿರುತ್ತಾರೆ. ಮೃತ ಹಾಲೇಶಪ್ಪನವರಿಗೆ 2 ಜನ ಗಂಡು ಮಕ್ಕಳು ಹಾಗೂ 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಅವರುಗಳಲ್ಲಿ ವಾದಿ ಹಾಗೂ 6 ನೇ ಪ್ರತಿವಾದಿ ಹಾಲೇಶಪ್ಪ ಹಾಗೂ ಗಿರಿಜಮ್ಮ ಇವರ ಹೆಣ್ಣು ಮಕ್ಕಳು ಇರುತ್ತಾರೆ.

3. ವಾದಿಯ ಪ್ರಕಾರ ದಾವಾ ಶೆಡ್ಯೂಲ್ ಅ ರಿಂದ ಡಿ ವರಗಿನ ಆಸ್ತಿಗಳಲ್ಲಿ ಅವರಿಗೆ 1/6 ಭಾಗ ಬರಬೇಕಿದ್ದು, ವಾದಿ ಮತ್ತು ಪ್ರತಿವಾದಿಗಳನ್ನು ಬಿಟ್ಟು ಮೃತ ಹಾಲೇಶಪ್ಪ ಹಾಗೂ ಗಿರಿಜಮ್ಮನವರಿಗೆ ಯಾವುದೇ ನೇರ ವಾರಸುದಾರರು ಇರುವುದಿಲ್ಲ. ದಾವಾ ಶೆಡ್ಯೂಲ್ ಎ ರಲ್ಲಿ ಇರುವ 2 ನೇ ಆಸ್ತಿ ಹಾಗೂ ಡಿ ರಲ್ಲಿ ಇರುವ 9 ನೇ ಆಸ್ತಿಯನ್ನು ಒಟ್ಟು ಕುಟುಂಬದ ಆದಾಯದಿಂದ ಖರೀದಿಸಿದ್ದು, ಅವುಗಳು ಸಹ ಒಟ್ಟು ಕುಟುಂಬದ ಆಸ್ತಿಗಳಾಗಿರುತ್ತವೆ. ದಾವಾ ಆಸ್ತಿಗಳಾದ ಸಿ ಮತ್ತು ಡಿ ರಲ್ಲಿ 2 ರಿಂದ 9 ನೇ ಆಸ್ತಿಗಳನ್ನು ಒಟ್ಟು ಕುಟುಂಬದ ವತಿಯಿಂದ ಖರೀದಿಸಿ ಆರ್‌ಸಿಸಿ ಮನೆಯನ್ನು ಕಟ್ಟಿಸಿದ್ದು ಇರುತ್ತದೆ. ಸದರಿ ಆಸ್ತಿಗಳಲ್ಲಿ ವಾದಿಗೂ ಸಹ ಸಮಾನವಾಗಿ 1/6 ಹಿಸ್ಸೆ ಬರಬೇಕಾಗಿದ್ದು, ಹಿಸ್ಸೆಯನ್ನು ಕೇಳಲು ಹೋದಾಗ ಪ್ರತಿವಾದಿಗಳು ವಿಭಾಗ ಮಾಡಿಕೊಡಲು ನಿರಾಕರಿಸಿ ಆಸ್ತಿಯನ್ನು ಮಾರಾಟ ಮಾಡುವ ದುರುದ್ದೇಶವನ್ನು ಹೊಂದಿರುತ್ತಾರೆ. ಆದುದರಿಂದ ದಾವೆ ನಿರ್ಣಯವಾಗುವವರೆಗೆ ಪ್ರತಿವಾದಿ 1 ರಿಂದ 5 ರವರು ದಾವಾ ಶೆಡ್ಯೂಲ್ ಎ ರಿಂದ ಡಿ ರಲ್ಲಿರುವ ಆಸ್ತಿಗಳನ್ನು ಯಾರಿಗೂ ಯಾವುದೇ ರೀತಿಯಲ್ಲೂ ಪರಬಾರೆ ಮಾಡದಂತೆ ಆದೇಶವನ್ನು ಮಾಡಬೇಕೆಂದು ಕೋರಿಕೊಳ್ಳುತ್ತಾರೆ ಹಾಗೂ ಮಧ್ಯಂತರ ಅರ್ಜಿಯನ್ನು ಪುರಸ್ಕರಿಸಲು ಕೋರಿಕೊಳ್ಳುತ್ತಾರೆ.

4. ಪ್ರತಿವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿ ಸಂಖ್ಯೆ 2 ಕ್ಕೆ ತಮ್ಮ ತಕರಾರನ್ನು ಸಲ್ಲಿಸಿದ್ದು, ಅದರಲ್ಲಿ ಪ್ರತಿವಾದಿಗಳು ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಮತ್ತು ಪಿತ್ರಾರ್ಜಿತ ಆಸ್ತಿಗಳು ಎಂಬುದನ್ನು ಸ್ಪಷ್ಟವಾಗಿ ನಿರಾಕರಿಸುತ್ತಾರೆ. ಪ್ರತಿವಾದಿಗಳು ವಾದಿಯು ಸುಳ್ಳು ವಿಚಾರಗಳನ್ನು ಆಧರಿಸಿ ಸುಳ್ಳು ದಾವೆಯನ್ನು ಸಲ್ಲಿಸಿರುತ್ತಾರೆ ಎಂದು ಹೇಳಿರುತ್ತಾರೆ. ಪ್ರತಿವಾದಿಗಳ ಪ್ರಕಾರ ದಾವಾ ಶೆಡ್ಯೂಲ್ ಎ ರಿಂದ ಡಿ ರಲ್ಲಿರುವ ಆಸ್ತಿಗಳನ್ನು ಪ್ರತಿವಾದಿ 1 ರಿಂದ 2 ರವರು ಪ್ರತಿವಾದಿ 7 ಮತ್ತು 8 ರವರ ಹೆಸರಿನಲ್ಲಿ ತಮ್ಮ ಸ್ವಂತ ಆದಾಯದಿಂದ ಗಳಿಸಿದ್ದು ಅವುಗಳು ಯಾವತ್ತು ಒಟ್ಟು ಕುಟುಂಬದ ಆಸ್ತಿಗಳಾಗಿರುವುದಿಲ್ಲ ಎಂದು ತಿಳಿಸಿರುತ್ತಾರೆ. ಪ್ರತಿವಾದಿಗಳ ಪ್ರಕಾರ ದಾವಾ ಶೆಡ್ಯೂಲ್ ಎ ರಲ್ಲಿ ಇರುವ 2 ನೇ ಆಸ್ತಿಯು ಪ್ರತಿವಾದಿ 7 ಮತ್ತು 8 ರವರ ಹೆಸರಿನಲ್ಲಿ ಪ್ರತಿವಾದಿ 1 ಮತ್ತು 2 ರವರು ಖರೀದಿಸಿದ್ದು, ಅದರಲ್ಲಿ ವಾದಿಗೆ ಅಥವಾ ಯಾವುದೇ ಹಕ್ಕು ಇರುವುದಿಲ್ಲ. ಅದೇ ರೀತಿ ದಾವಾ ಶೆಡ್ಯೂಲ್ ಎ ರಲ್ಲಿ ಇರುವ 1 ನೇ ಆಸ್ತಿಯು ಶೆಡ್ಯೂಲ್ ಬಿ ಆಸ್ತಿಗಳು ಹಾಗೂ ದಾವಾ ಶೆಡ್ಯೂಲ್ ಡಿ ರಲ್ಲಿರುವ 1 ನೇ ಆಸ್ತಿಯಲ್ಲಿ ವಾದಿಗೆ ಯಾವತ್ತು ದಾವಾ ಆಸ್ತಿಗಳಲ್ಲಿ ಕಬ್ಜಾ ಮತ್ತು ವಹಿವಾಟು ಹೊಂದಿರುವುದಿಲ್ಲ. ಪ್ರತಿವಾದಿಗಳ ಪ್ರಕಾರ ಶೆಡ್ಯೂಲ್ ಬಿ ರಲ್ಲಿ ಇರುವ ಆಸ್ತಿಗಳು ಹಾಗೂ ದಾವಾ ಶೆಡ್ಯೂಲ್ ಡಿ ನಲ್ಲಿ ಇರುವ 2 ರಿಂದ 9 ನೇ ಆಸ್ತಿಗಳು ಮೃತ ಹಾಲಪ್ಪನವರ ಮಕ್ಕಳು ತಮ್ಮ ಸ್ವಂತ ದುಡಿಮೆಯಿಂದ ಗಳಿಸಿದ ಆಸ್ತಿಗಳಾಗಿದ್ದು, ಅವುಗಳಲ್ಲಿ ವಾದಿಗೆ ಮತ್ತು ಇನ್ನೊಬ್ಬ ಮಗಳಿಗೆ ಯಾವುದೇ ಹಿಸ್ಸೆ ಇಲ್ಲ ಎಂದು ಹೇಳಿರುತ್ತಾರೆ. ಮೃತ ಹಾಲೇಶಪ್ಪನವರು ತಮ್ಮ ಜೀವಿತಾವಧಿಯಲ್ಲಿ ಇದೇ ನ್ಯಾಯಾಲಯದಲ್ಲಿ ಅಸಲು ದಾವಾ ಸಂಖ್ಯೆ 103/2013 ರಲ್ಲಿ ಒಂದು ದುರುದ್ದೇಶ ದಾವೆ ಮಾಡಿದ್ದು, ವಜಾಗೊಂಡಿರುತ್ತದೆ. ಆ ಪ್ರಕರಣದಲ್ಲಿ ವಾದಿಯು

ಇತರರ ಜೊತೆ ಸೇರಿ ಹಾಲೇಶಪ್ಪನವರಿಗೆ ಚಿತಾವಣೆ ಮಾಡಿ ದಾವೆ ಸಲ್ಲಿಸಿದ್ದು ಇರುತ್ತದೆ ಎಂದು ಪ್ರತಿವಾದಿಗಳು ತಿಳಿಸಿರುತ್ತಾರೆ.

5. ಮೃತ ಹಾಲೇಶಪ್ಪನವರು ತನ್ನ ಜೀವಿತಾವಧಿಯಲ್ಲಿ ತನ್ನ ಗಂಡು ಮಕ್ಕಳ ವಿರುದ್ಧ ಜೀವನಾಂಶ ಕೇಳಿ ಒಂದು ಕ್ರಿ.ಮಿಸ್. ಪ್ರಕರಣ ಮಾಡಿದ್ದು, ಅದೂ ಸಹ ವಾದಿಗಳ ಚಿತಾವಣೆಯಿಂದ ಮಾಡಿದ್ದು ಇರುತ್ತದೆ. ಪ್ರತಿವಾದಿಗಳು ಟೈಲ್ಸ್ ಹಾಗೂ ಸಿಮೆಂಟ್ ವ್ಯಪಾರ ಮಾಡಿ ಸಾಕಷ್ಟು ಹಣ ಗಳಿಸಿದ್ದು, ಆ ಆದಾಯದಿಂದ ದಾವಾ ಆಸ್ತಿಗಳನ್ನು ಖರೀದಿಸಿದ್ದು ಇರುತ್ತದೆ. ಆದುದರಿಂದ ದಾವಾದ ಯಾವುದೇ ಆಸ್ತಿಗಳಲ್ಲಿ ವಾದಿಗೆ ಯಾವುದೇ ರೀತಿಯ ಹಕ್ಕು, ಅಧಿಕಾರ ಹಾಗೂ ಹಿತಾಸಕ್ತಿ ಇರುವುದಿಲ್ಲ. ಅನುಕೂಲತೆಯ ಸಮತೋಲನವು ವಾದಿ ಪರವಾಗಿ ಇರುವುದಿಲ್ಲ. ಆದುದರಿಂದ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ವಜಾ ಮಾಡಬೇಕೆಂದು ಕೋರಿಕೊಳ್ಳುತ್ತಾರೆ.

6. ಅರ್ಜಿದಾರರು ಸಲ್ಲಿಸಲಾದ ಅರ್ಜಿ, ಎದುರುದಾರರು ಸಲ್ಲಿಸಲಾದ ತಕರಾರು ಹಾಗೂ ಈ ದಾವೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಈ ನ್ಯಾಯಾಲಯವು ಕೂಲಂಕುಷವಾಗಿ ಪರಿಶೀಲಿಸಲಾಯಿತು, ಈ ಅರ್ಜಿಯನ್ನು ನಿರ್ಧರಿಸಲು ಈ ಕೆಳಕಂಡ ಅಂಶಗಳು ಉದ್ಭವಿಸುತ್ತವೆ.

## ಅಂಶಗಳು

1. ವಾದಿಯು ಈ ದಾವೆಯನ್ನು ಮೇಲ್ನೋಟಕ್ಕೆ ರುಜುವಾತು ಪಡಿಸುತ್ತಾರೆಯೇ ?
2. ವಾದಿಯು ಈ ದಾವೆಯಲ್ಲಿ ಅನುಕೂಲತೆಯ ಸಮತೋಲನವು ತಮ್ಮ ಪರವಾಗಿದೆ ಎಂಬುದನ್ನು ನ್ಯಾಯಾಲಯದಲ್ಲಿ ರುಜುವಾತುಪಡಿಸುತ್ತಾರೆಯೇ ?

3. ವಾದಿಯು ಈ ಅರ್ಜಿಯಲ್ಲಿ ಕೋರಲಾದ ಪರಿಹಾರವನ್ನು ನೀಡದಿದ್ದ ಸಂದರ್ಭದಲ್ಲಿ ವಾದಿಗೆ ತುಂಬಲಾರದ ನಷ್ಟ ಅಥವಾ ಹಾನಿ ಉಂಟಾಗುತ್ತದೆ ಎಂಬುದನ್ನು ರುಜುವಾತುಪಡಿಸುತ್ತಾರೆಯೇ ?

4. ಯಾವ ಆದೇಶ ಅಥವಾ ಡಿಕ್ರಿ ?

7. ಅರ್ಜಿದಾರ ಮತ್ತು ಎದುರುದಾರರ ಪರ ವಕೀಲರ ವಾದವನ್ನು ಆಲಿಸಲಾಯಿತು, ಈ ದಾವೆಯಲ್ಲಿ ಲಭ್ಯವಿರುವ ದಾಖಲೆಗಳನ್ನು ಕೂಲಂಕುಷವಾಗಿ ಪರಿಶೀಲಿಸಲಾಯಿತು, ಈ ಮೇಲ್ಕಂಡ ಅಂಶಗಳಿಗೆ ಈ ನ್ಯಾಯಾಲಯವು ಈ ಕೆಳಕಂಡಂತೆ ಉತ್ತರಿಸುತ್ತದೆ.

ಅಂಶ ಸಂಖ್ಯೆ : 1 : ಸಕಾರಾತ್ಮಕವಾಗಿ
ಅಂಶ ಸಂಖ್ಯೆ : 2 : ಸಕಾರಾತ್ಮಕವಾಗಿ
ಅಂಶ ಸಂಖ್ಯೆ : 3 : ವಾದಿಯ ಪರವಾಗಿ
ಅಂಶ ಸಂಖ್ಯೆ : 4 : ಅಂತಿಮ ಆದೇಶದಂತೆ, ಈ ಕೆಳಕಂಡ ಕಾರಣಗಳಿಗಾಗಿ

## ಕಾರಣಗಳು

8. **ಅಂಶ ಸಂಖ್ಯೆ 1**:- ವಾದಿಯು ತನ್ನ ಪರವಾಗಿ ಮೇಲ್ನೋಟಕ್ಕೆ ಕಾಣುವ ಪ್ರಕರಣ ಇದೆ ಎಂದು ಸಾಬೀತು ಪಡಿಸಲು ಈ ಹಿಂದೆ ಇದೇ ನ್ಯಾಯಾಲಯದಲ್ಲಿ ಹಾಲೇಶಪ್ಪನವರು ಸಲ್ಲಿಸಿದ ದಾವಾ ಸಂಖ್ಯೆ 103/2013 ರ ರೋಜನಾಮೆ, ವಾದ ಪತ್ರ, ಆ ಪ್ರಕರಣದಲ್ಲಿ ಪ್ರತಿವಾದಿ 3 ರವರಾದ ಜಯದೇವಪ್ಪ ಇವರು ಸಲ್ಲಿಸಿದ ಪ್ರತಿವಾದ ಪತ್ರ ಹಾಗೂ ಇತರ ದಾಖಲೆಗಳನ್ನು ಹಾಜರುಪಡಿಸಿರುತ್ತಾರೆ. ಅಸಲು ದಾವಾ ಸಂಖ್ಯೆ 103/2013 ರಲ್ಲಿ ಈ ಪ್ರಕರಣದಲ್ಲಿನ 1 ನೇ ಪ್ರತಿವಾದಿಯು ಸಹ ಪ್ರತಿವಾದ ಪತ್ರವನ್ನು ಸಲ್ಲಿಸಿದ್ದು, ಆ ಪ್ರತಿವಾದ ಪತ್ರವು ದಿನಾಂಕ 14.06.2016 ರಂದು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಇರುತ್ತದೆ. ಆ

ಪ್ರತಿವಾದ ಪತ್ರದ ಪ್ರಕಾರ ಈ ಪ್ರಕರಣದ ಪ್ರತಿವಾದಿ 1ರವರು ಅವರ ತಂದೆ ಸಲ್ಲಿಸಿದ ದಾವೆಯು ನಿಜ ಇದ್ದು, ಆ ಪ್ರಕಾರ ಆ ದಾವೆಯನ್ನು ಡಿಕ್ರಿ ಮಾಡಲು ತನ್ನ ಅಭ್ಯಂತರ ಇಲ್ಲ ಎಂದು ಪ್ರತಿವಾದ ಪತ್ರದಲ್ಲಿ ಬರೆದುಕೊಂಡಿದ್ದರು. ಈ ಪ್ರಕರಣದಲ್ಲಿ ಇರುವ ಎಲ್ಲಾ ದಾವಾ ಆಸ್ತಿಗಳು ಅಸಲು ದಾವಾ ಸಂಖ್ಯೆ 103/2013 ರಲ್ಲಿ ದಾವಾ ಆಸ್ತಿಗಳಾಗಿದ್ದು, ಈ ಪ್ರಕರಣದ 1 ನೇ ಪ್ರತಿವಾದಿಯ ತಂದೆ ಹಾಲೇಶಪ್ಪನವರು ಆ ದಾವೆಯಲ್ಲಿ ಎಲ್ಲಾ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಬರೆದುಕೊಂಡಿದ್ದು ಇರುತ್ತದೆ. 4 ನೇ ಪ್ರತಿವಾದಿಯು ತನ್ನ ಪ್ರತಿವಾದ ಪತ್ರದಲ್ಲಿ ವಾದಿಯ ಮಾಗಣಿಯನ್ನು ಒಪ್ಪಿಕೊಂಡಿರುವುದರಿಂದ ಈಗ ಆಸ್ತಿಗಳನ್ನು ಪ್ರತಿವಾದಿ 1 ಮತ್ತು 2ರವರು ಪ್ರತಿವಾದಿ 7 ಮತ್ತು 8ರವರ ಹೆಸರಿನಲ್ಲಿ ಖರೀದಿಸಿದ್ದಾರೆ ಎಂಬುದಾಗಿ ಹೇಳಿರುವುದು ಸರಿಯಾದ ಕ್ರಮವಲ್ಲ. ಪ್ರತಿವಾದಿಗಳ ಪರ ವಕೀಲರು ಮಧ್ಯಂತರ ಅರ್ಜಿ 2ರ ತಕರಾರು ಜೊತೆಗೆ ದಿನಾಂಕ 07.02.2000 ರಂದು ಹಾಗೂ 29.12.2014 ಹಾಗೂ 24.06.2016 ರಂದು ಖರೀದಿಸಿದ ಮೂರು ಕ್ರಯ ಪತ್ರಗಳನ್ನು ಹಾಜರುಪಡಿಸಿದ್ದು, ರಿ. ಸರ್ವೆ ನಂ. 70/1 ಪ್ಲಾಟ್ ನಂ. 3, ರಿ. ಸರ್ವೆ ನಂ. 70/1 ಪ್ಲಾಟ್ ನಂ. 1ರ ಪೈಕಿ ಹಾಗೂ ವಿಪಿಸಿ ನಂ. 14/19 ಇವುಗಳನ್ನು ಕ್ರಮವಾಗಿ ವೀರಭದ್ರಪ್ಪ, ಶೈಲಜಾ ಹಾಗೂ ಗೌರಮ್ಮ ಇವರ ಹೆಸರಿನಲ್ಲಿ ಖರೀದಿಸಿದ್ದು ಇರುತ್ತದೆ. ಈ ಪ್ರಾಥಮಿಕ ಹಂತದಲ್ಲಿ ಯಾವುದೇ ಆಸ್ತಿಯನ್ನು ಒಟ್ಟು ಕುಟುಂಬದ ಸದಸ್ಯರು ಖರೀದಿಸಿದ್ದರೆ ಅವುಗಳನ್ನು ಒಟ್ಟು ಕುಟುಂಬದ ಆಸ್ತಿಗಳು ಎಂದು ಪೂರ್ವಭಾವನೆ ಮಾಡಬಹುದಾಗಿರುತ್ತದೆ. ಅದಕ್ಕೆ ಪೂರಕವಾಗಿ ಇದೇ ನ್ಯಾಯಾಲಯದಲ್ಲಿ ಸಲ್ಲಿಸಿದ ಅಸಲು ದಾವಾ ಸಂಖ್ಯೆ 103/2013 ರಲ್ಲಿ ಸ್ವತಃ 1 ನೇ ಪ್ರತಿವಾದಿಯು ಅವರ ತಂದೆ ಸಲ್ಲಿಸಿದ ದಾವೆಯಲ್ಲಿ ಎಲ್ಲಾ ವಿಷಯಗಳನ್ನು ಒಪ್ಪಿಕೊಂಡಿರುವುದರಿಂದ, ಈ ಹಂತದಲ್ಲಿ ಎಲ್ಲಾ ದಾವಾ ಆಸ್ತಿಗಳು ಒಟ್ಟು ಕುಟುಂಬದ ಆಸ್ತಿಗಳು ಎಂದು ಪೂರ್ವಭಾವನೆ ಮಾಡಬೇಕಾಗಿರುತ್ತದೆ. ದಾವಾ ಆಸ್ತಿಗಳ ಉತಾರಗಳು

ಪ್ರತಿವಾದಿ 7, 8 ಹಾಗೂ ಪ್ರತಿವಾದಿ 1 ಮತ್ತು 2ರವರ ಹೆಸರಿನಲ್ಲಿ ಇದ್ದರೂ ಸಹ ಹಾಲೇಶಪ್ಪನವರ ಮಕ್ಕಳ ಮಧ್ಯೆ ಆಸ್ತಿ ವಿಭಾಗ ಮಾಡಿದ ಬಗ್ಗೆ ಯಾವುದೇ ದಾಖಲೆಗಳನ್ನು ಹಾಜರುಪಡಿಸದ ಕಾರಣ ವಾದಿ ಪರವಾಗಿ ಮೇಲ್ನೋಟಕ್ಕೆ ಕಂಡುಬರುವ ಪ್ರಕರಣ ಇದೆ ಎಂಬುದು ಗೊತ್ತಾಗುತ್ತದೆ. ಆದುದರಿಂದ ಸದರಿ ಅಂಶ ಸಂಖ್ಯೆ 1 ಕ್ಕೆ ನಾನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

9. **<u>ಅಂಶ ಸಂಖ್ಯೆ 2</u>**:- ಒಂದು ವೇಳೆ ಪ್ರತಿವಾದಿ 1, 2, 7 ಹಾಗೂ 8ರವರು ತಮ್ಮ ಹೆಸರಿನಲ್ಲಿ ಇರುವ ಆಸ್ತಿಗಳನ್ನು ಬೇರೆಯವರಿಗೆ ಪರಬಾರೆ ಮಾಡಿದ್ದಲ್ಲಿ ಈ ಪ್ರಕರಣ ದಾರಿ ತಪ್ಪುವ ಸಾಧ್ಯತೆ ಇರುತ್ತದೆ ಹಾಗೂ ಪ್ರಕರಣದ ವಿಲೇವಾರಿ ವಿಳಂಬವಾಗುವ ಸಾಧ್ಯತೆ ಇರುತ್ತದೆ. ಅದು ಬಹು ಪ್ರಕರಣಗಳನ್ನು ಹುಟ್ಟಿ ಹಾಕುವ ಸಾಧ್ಯತೆ ಇರುತ್ತದೆ. ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರ ಉದ್ದೇಶ ಬಹು ಪ್ರಕರಣಗಳನ್ನು ಹುಟ್ಟಿ ಹಾಕುವುದಲ್ಲ. ಬದಲಿಗೆ ವಾದಿ ಮತ್ತು ಪ್ರತಿವಾದಿಗಳ ನಡುವೆ ಇರುವ ವಿವಾದವನ್ನು ಸಾಧ್ಯವಾದಷ್ಟು ಒಂದೇ ಪ್ರಕರಣದಲ್ಲಿ ಇತ್ಯರ್ಥಪಡಿಸುವುದು ಹಾಗೂ ದಾವಾ ಆಸ್ತಿಗಳ ಸ್ವರೂಪ ಬದಲಾಗಬಾರದು ಎಂಬ ಉದ್ದೇಶ ಇರುತ್ತದೆ. ಒಂದು ವೇಳೆ ಪ್ರತಿವಾದಿಗಳು ದಾವಾ ಆಸ್ತಿಗಳಲ್ಲಿ ಯಾವುದಾದರೂ ಆಸ್ತಿಯನ್ನು ಯಾವುದಾದರೂ ಒಬ್ಬ ವ್ಯಕ್ತಿಗೆ ಪರಭಾರೆ ಮಾಡಿದ್ದಲ್ಲಿ ಅದರಿಂದ ಬಹು ಪ್ರಕರಣಗಳು ಹುಟ್ಟಿಕೊಳ್ಳುವ ಮತ್ತು ವ್ಯಾಜ್ಯ ಸಂಕೀರ್ಣವಾಗುವ ಸಾಧ್ಯತೆ ಇರುತ್ತದೆ. ಆದುದರಿಂದ ಅಂಶ ಸಂಖ್ಯೆ 2 ಕ್ಕೆ ನಾನು ಸಕಾರಾತ್ಮಕವಾಗಿ ಉತ್ತರಿಸುತ್ತೇನೆ.

10. **<u>ಅಂಶ ಸಂಖ್ಯೆ 3</u>**:- ಒಂದು ವೇಳೆ ವಾದಿಗೆ ಮಧ್ಯಂತರ ಅರ್ಜಿ ಸಂಖ್ಯೆ 2 ರಲ್ಲಿ ಮಾಗಣಿ ಮಾಡಿದಂತೆ ಮಧ್ಯಂತರ ತಾಕೀತು ಆಜ್ಞೆಯನ್ನು ಕೊಡದೇ ಇದ್ದಲ್ಲಿ ವಾದಿಗೆ

ತುಂಬಲಾರದ ನಷ್ಟ, ತೊಂದರೆ ಉಂಟಾಗುತ್ತದೆ. ಒಂದು ವೇಳೆ ಮಧ್ಯಂತರ ಅರ್ಜಿ ಸಂಖ್ಯೆ 2 ರಲ್ಲಿ ಕೇಳಿದ ಪ್ರಕಾರ ದಾವೆ ಮುಗಿಯುವವರೆಗೆ ತಾತ್ಕಾಲಿಕ ತಡೆಯಾಜ್ಞೆಯನ್ನು ನೀಡಿದರೆ ಅದರಿಂದ ಪ್ರತಿವಾದಿಗಳಿಗೆ ಯಾವುದೇ ರೀತಿಯಲ್ಲೂ ಆರ್ಥಿಕ ಹಾಗೂ ಇತರ ಯಾವುದೇ ತೊಂದರೆ ಆಗುವುದಿಲ್ಲ. ಆದುದರಿಂದ ಸದರಿ ಅಂಶ ಸಂಖ್ಯೆ 3 ವಾದಿಯ ಪರವಾಗಿ ಇದೆ ಎಂದು ಉತ್ತರಿಸುತ್ತೇನೆ.

11. **ಅಂಶ ಸಂಖ್ಯೆ 4**:- ಮೇಲೆ ಚರ್ಚಿಸಲಾದ ಕಾರಣಗಳಿಗಾಗಿ, ಅಂತಿಮ ಆದೇಶ ಈ ಕೆಳಕಂಡಂತೆ.

## ಆದೇಶ

ವಾದಿ ಸಿವಿಲ್ ಪ್ರಕ್ರಿಯಾ ಸಂಹಿತೆ ಕ್ರಮಾದೇಶ 39 ನಿಯಮ 1 ಮತ್ತು 2 ರಡಿಯಲ್ಲಿ ಸಲ್ಲಿಸಲಾದ ಮಧ್ಯಂತರ ಅರ್ಜಿ ಸಂಖ್ಯೆ 2 ನ್ನು ಖರ್ಚಿನೊಂದಿಗೆ ಪುರಸ್ಕರಿಸಲಾಗಿದೆ.

ಪ್ರತಿವಾದಿಗಳು ದಾವಾ ಶೆಡ್ಯೂಲ್ ಎ ರಿಂದ ಡಿ ರಲ್ಲಿ ಇರುವ ಆಸ್ತಿಗಳನ್ನು ಯಾರಿಗೂ, ಯಾವುದೇ ರೀತಿಯಲ್ಲೂ ಈ ದಾವೆ ಇತ್ಯರ್ಥವಾಗುವವರೆಗೆ ಪರಭಾರೆ ಮಾಡದಂತೆ ಮಧ್ಯಂತರ ತಡೆಯಾಜ್ಞೆಯನ್ನು ನೀಡಿ ಪ್ರತಿಬಂಧಿಸಲಾಗಿದೆ.

*( ಶೀಘ್ರಲಿಪಿಗಾರರಿಗೆ ಉಕ್ತಲೇಖನವನ್ನು ಕೊಟ್ಟು ಅವರು ಗಣಕಯಂತ್ರದ ಮೂಲಕ ಲಿಪ್ಯಂತರ ಮಾಡಿದ ಬಳಿಕ ಅನುಲಿಪಿಯನ್ನು ಪರಿಶೀಲಿಸಿ, ತಿದ್ದಿ ಬಹಿರಂಗ ನ್ಯಾಯಾಲಯದಲ್ಲಿ ಈ ದಿನ ಅಂದರೆ ದಿನಾಂಕ **19 ನೇ ಏಪ್ರಿಲ್ 2022** ರಂದು ಘೋಷಿಸಿದ್ದೇನೆ.)*

***Sd/-***

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಮತ್ತು ಜೆಎಂಎಫ್‌ಸಿ ನ್ಯಾಯಾಲಯ, ರಾಣೇಬೆನ್ನೂರು**